## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 999
2. ಮಾನ್ಯ ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 17.12.2024
4. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬಾಗಲಕೋಟೆ ಜಿಲ್ಲೆಯಲ್ಲಿರುವ ರನ್ನ ಸಕ್ಕರೆ ಕಾರ್ಖಾನೆಯನ್ನು LROT ಮೂಲಕ ಲೀಜ್ (Lease) ಮಾಡಿಕೊಳ್ಳಲಾಗಿದೆಯೇ; ಮಾಡಿಕೊಂಡಲ್ಲಿ ಎಷ್ಟು ವರ್ಷಕ್ಕೆ ಯಾವ ನಿಯಮ ಮಾನದಂಡಗಳನ್ನು ಅನುಸರಿಸಲಾಗಿದೆ. (ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:16.07.2024ರಲ್ಲಿ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ, ತಿಮ್ಮಾಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು 30 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. ಆಧಾರದ ಮೇಲೆ ಖಾಸಗಿಯವರಿಗೆ ಗುತ್ತಿಗೆ ನೀಡುವುದಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ / ನಿಯಮಗಳನ್ವಯ ಟೆಂಡರ್ ಕರೆಯಲು ಅನುಮತಿಸಲಾಗಿತ್ತು. |
| (ಆ) | ಕೆಟಿಪಿಪಿ (Karnataka Transparency in Public Procurements Act ) ನಿಯಮದ ಪ್ರಕಾರ ಟೆಂಡರ್ ಪ್ರಕ್ರಿಯೆಯನ್ನು ಅನುಸರಿಸಲಾಗಿದೆಯೇ: ಅನುಸರಿಸಿದ್ದಲ್ಲಿ ಯಾವ ನಿಯಮದಡಿ ಸದರಿ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗಿದೆ ಮಾಹಿತಿ ನೀಡುವುದು ಮತ್ತು ಅನುಸರಿಸದಿದ್ದಲ್ಲಿ ಬೇರೆ ಯಾವ ಮಾನದಂಡಗಳನ್ನು ಅನುಸರಿಸಲಾಗಿದೆ ವಿವರಿಸಿ ಸೂಕ್ತ ಮಾಹಿತಿ ಮತ್ತು ವಿವರಣೆ ನೀಡುವುದು: | ಅದರಂತೆ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ, ತಿಮ್ಮಾಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು ಗುತ್ತಿಗೆ ನೀಡುವ ಸಂಬಂಧ ದಿನಾಂಕ:22.07.2024ರಂದು ಇ-ಪ್ರೊಕ್ಯುರ್‌ಮೆಂಟ್ ಮುಖಾಂತರ ಇ-ಟೆಂಡರ್ ಪ್ರಕಟಣೆಯನ್ನು ಹಾಗೂ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.<br><br>ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದಿನಾಂಕ:30.08.2024ರಂದು ತಾಂತ್ರಿಕ ಬಿಡ್ ಅನ್ನು ತೆರೆಯಲಾಗಿದ್ದು, ಮೆ.ಬೀಳಗಿ ಶುಗರ್ ಮಿಲ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ- ಈ ಕಂಪನಿಯವರು ಮಾತ್ರ ಬಿಡ್ ಅನ್ನು ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿದ ತಾಂತ್ರಿಕ ಬಿಡ್ ಪರಿಶೀಲಿಸಿ ದಿನಾಂಕ:31.08.2024ರಂದು ಆರ್ಥಿಕ ಬಿಡ್ ಅನ್ನು ತೆರೆಯಲಾಗಿರುತ್ತದೆ. ಸದರಿಯವರು ರೂ.30.00 ಕೋಟಿಗಳ ಮುಂಗಡ ಹಣ ಮತ್ತು ರೂ.108.00 ಕೋಟಿಗಳ ಗುತ್ತಿಗೆ ಮೊತ್ತವನ್ನು ನಮೂದಿಸಿದ್ದರು. ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ /576 /ವೆಚ್ಚ-12/2018, ದಿನಾಂಕ:22.05.2018ರಲ್ಲಿ ನಿಯಮಿಸಿರುವಂತೆ ಆರ್ಥಿಕ ಬಿಡ್‌ನಲ್ಲಿ ಏಕವ್ಯಕ್ತಿ ಬಿಡ್ಡುದಾರರಾದ ಮೆ.ಬೀಳಗಿ ಶುಗರ್ ಮಿಲ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರೊಂದಿಗೆ ದರ ಸಂಧಾನವನ್ನು ನಡೆಸಲಾಗಿರುತ್ತದೆ. ಏಕವ್ಯಕ್ತಿ ಬಿಡ್ಡುದಾರರಾದ ಮೆ.ಬೀಳಗಿ ಶುಗರ್ ಮಿಲ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ರೂ.471.00 ಕೋಟಿಗಳ ಪರಿಷ್ಕೃತ ಗುತ್ತಿಗೆ ಮೊತ್ತದ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. |

<table>
<tr>
<td></td>
<td></td>
<td>ದಿನಾಂಕ:04.07.2024ರಂದು ಜರುಗಿದ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ:32ರಲ್ಲಿ ಇಲಾಖಾ ಸಚಿವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಸದರಿ ಗುತ್ತಿಗೆ ಪ್ರಕ್ರಿಯೆಯನ್ನು ಅಂತಿಮಗೊಳಿಸಿ, ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:10.10.2024ರಲ್ಲಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ, ತಿಮ್ಮಾಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು 30 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. ಆಧಾರದ ಮೇಲೆ ಮೆ.ಬೀಳಗಿ ಶುಗರ್ ಮಿಲ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರಿಗೆ ಗುತ್ತಿಗೆ ನೀಡಲು ಅನುಮೋದನೆಯನ್ನು ನೀಡಲಾಗಿರುತ್ತದೆ.<br>ಗುತ್ತಿಗೆದಾರರು ಗುತ್ತಿಗೆ ಒಪ್ಪಂದದ ಷರತ್ತು ಮತ್ತು ನಿಬಂಧನೆಗಳನ್ವಯ ಭದ್ರತಾ ಠೇವಣಿ ರೂ.5.00 ಕೋಟಿಗಳನ್ನು ಮತ್ತು ಮುಂಗಡ ಹಣ ರೂ.30.00 ಕೋಟಿಗಳನ್ನು ರೈತರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಪಾವತಿಸಿದ್ದು, ಗುತ್ತಿಗೆದಾರರು ಮತ್ತು ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ನಡುವೆ ಗುತ್ತಿಗೆ ಒಪ್ಪಂದವನ್ನು ಮಾಡಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ.</td>
</tr>
<tr>
<td>(ಇ)</td>
<td>ಸದರಿ ಸಕ್ಕರೆ ಕಾರ್ಖಾನೆಯು ರೈತರಿಗೆ ನೀಡಬೇಕಾದ ಮೊತ್ತವನ್ನು ಸಂಪೂರ್ಣವಾಗಿ ನೀಡಿದೆಯೇ ಅಥವಾ ಬಾಕಿ ಉಳಿಸಿಕೊಂಡಿದೆಯೇ: ಸಂಪೂರ್ಣ ಮಾಹಿತಿ ನೀಡುವುದು ಮತ್ತು ಬಾಕಿ ಮೊತ್ತವನ್ನು ಯಾವ ಕಾಲಮಿತಿಯೊಳಗೆ ರೈತರಿಗೆ ನೀಡಲಾಗುವುದು ತಿಳಿಸಿ:</td>
<td>ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ರೈತರಿಗೆ ಎಫ್.ಆರ್.ಪಿ. ದರದಂತೆ ಕಬ್ಬಿನ ಬಿಲ್ಲನ್ನು ಸಂಪೂರ್ಣವಾಗಿ ಪಾವತಿಸಲಾಗಿದೆ ಮತ್ತು ಎಫ್.ಆರ್.ಪಿ. ದರದನ್ವಯ ಯಾವುದೇ ಕಬ್ಬು ಬಿಲ್ಲು ಬಾಕಿ ಇರುವುದಿಲ್ಲ. ಆದರೆ, ಆಡಳಿತ ಮಂಡಳಿಯು ಕಾಲಕಾಲಕ್ಕೆ ಎಫ್.ಆರ್.ಪಿ. ಬೆಲೆಗಿಂತ ವರ್ಷವಾರು ಹೆಚ್ಚಿನ ಬೆಲೆಯನ್ನು ಘೋಷಿಸಿದ್ದು, ಅಂದಾಜು ಬಾಕಿ ರೂ.24.30 ಕೋಟಿಗಳಷ್ಟು ಇರುತ್ತದೆ. ಬಾಕಿ ಕುರಿತ ವರ್ಷವಾರು ವಿವರಗಳು ಈ ಕೆಳಕಂಡಂತೆ ಇರುತ್ತದೆ.
<table>
<tr><th>ಕ್ರಮ ಸಂಖ್ಯೆ</th><th>ಅಂದಾಜು ಬಾಕಿ ಮೊತ್ತ (ರೂ.ಕೋಟಿಗಳಲ್ಲಿ)</th></tr>
<tr><td>1999-2005</td><td>2.89</td></tr>
<tr><td>2013-14</td><td>5.44</td></tr>
<tr><td>2015-16</td><td>1.55</td></tr>
<tr><td>2017-18</td><td>4.88</td></tr>
<tr><td>2018-19</td><td>4.22</td></tr>
<tr><td>2019-20</td><td>5.32</td></tr>
<tr><td>ಒಟ್ಟು</td><td>24.30</td></tr>
</table>
ಸದರಿ ಬಾಕಿಗಳನ್ನು ಪರಿಶೀಲಿಸಿ ಆಂತರಿಕ ಲೆಕ್ಕ ಪರಿಶೋಧನೆ ಕೈಗೊಂಡು ಗುತ್ತಿಗೆದಾರರು ಗುತ್ತಿಗೆ ಒಪ್ಪಂದದ ಪ್ರಕಾರ ವರ್ಷವಾರು ಪಾವತಿಸುವ ಗುತ್ತಿಗೆ ಮೊತ್ತದಲ್ಲಿ ಕಾರ್ಖಾನೆಯ ಆರ್ಥಿಕತೆಗನುಗುಣವಾಗಿ ನಿಯಮಾನುಸಾರ ಪಾವತಿ ಮಾಡಲಾಗುವುದು.</td>
</tr>
</table>

| | | |
|---|---|---|
| (ಈ) | ಸದರಿ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಸರಿಯಾದ ಸಮಯಕ್ಕೆ ಸಂಬಳ ನೀಡಲಾಗುತ್ತಿದೆಯೇ; ನೌಕರರ ಸಂಬಳವನ್ನು ಬಾಕಿ ಉಳಿಸಿಕೊಳ್ಳಲಾಗಿದೆಯೇ ಯಾವ ಕಾಲಮಿತಿಯೊಳಗೆ ಬಾಕಿ ಉಳಿಸಿಕೊಂಡ ಸಂಬಂಳವನ್ನು ನೀಡಲಾಗುವುದು: (ಸಂಪೂರ್ಣ ಮಾಹಿತಿ ನೀಡುವುದು) | ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ನುರಿಸುವ ಕಾರ್ಯ ಸ್ಥಗಿತಗೊಂಡು ಕಾರ್ಖಾನೆಯು ಆರ್ಥಿಕ ಸಂಕಷ್ಟ ಉಂಟಾದ ಹಿನ್ನೆಲೆಯಲ್ಲಿ ಈ ಕಾರ್ಖಾನೆಯ ಕಾರ್ಮಿಕರಿಗೆ ನಿಗದಿತ ಸಮಯಕ್ಕೆ ಸರಿಯಾಗಿ ಸಂಬಳ ನೀಡಲು ಸಾಧ್ಯವಾಗಿರುವುದಿಲ್ಲ. ಕಾರ್ಮಿಕರಿಗೆ ರೂ.15.00 ಕೋಟಿಗಳ ವೇತನ ಬಾಕಿಯನ್ನು ಪಾವತಿಸುವುದು ಬಾಕಿ ಇರುತ್ತದೆ. ಪ್ರಸ್ತುತ ಈ ಕಾರ್ಖಾನೆಯನ್ನು ಮೆ.ಬೀಳಗಿ ಶುಗರ್ ಮಿಲ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದ್ದು, ಗುತ್ತಿಗೆದಾರರು ಪಾವತಿಸಿರುವ ಮುಂಗಡ ಹಣ ಮತ್ತು ವರ್ಷವಾರು ಪಾವತಿಸುವ ವಾರ್ಷಿಕ ಗುತ್ತಿಗೆ ಮೊತ್ತದಲ್ಲಿ ಕಾರ್ಖಾನೆಯ ಆರ್ಥಿಕತೆಗನುಗುಣವಾಗಿ ನಿಯಮಾನುಸಾರ ಪಾವತಿ ಮಾಡಲಾಗುವುದು. |
| (ಉ) | ಸದರಿ ಸಕ್ಕರೆ ಕಾರ್ಖಾನೆಯು ಪ್ರಸಕ್ತ ಸಾಲಿನಲ್ಲಿ ಕಬ್ಬು ನುರಿಸುವ ಕಾರ್ಯ ಪ್ರಾರಂಭಿಸಲಾಗಿದೆಯೇ: | ಗುತ್ತಿಗೆ ಒಪ್ಪಂದದ ಕರಾರಿನಂತೆ ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2014, ದಿನಾಂಕ:10.10.2024ರಲ್ಲಿ ಷರತ್ತು ಮತ್ತು ನಿಬಂಧನೆಗಳಂತೆ ಈ ಕಾರ್ಖಾನೆಯಲ್ಲಿ 2024-25ನೇ ಹಂಗಾಮಿನಲ್ಲಿ ಕಬ್ಬು ನುರಿಸುವ ಕಾರ್ಯವನ್ನು ಪ್ರಾರಂಭ ಮಾಡಲು ಪೂರ್ವಸಿದ್ದತಾ ಕಾರ್ಯವನ್ನು ಕೈಗೊಳ್ಳಲಾಗಿದೆ. |

**ಸಂಖ್ಯೆ:** ಸಿಐ 402 ಸಿಓಎಫ್ 2024

**(ಶಿವಾನಂದ ಎಸ್ ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು